ಸಿ. ಸಿ. ನಂ: 68/2023 ಪಿಡಬ್ಲ್ಯೂ: 1

ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 17.10.2023

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ**

1) ನಾನು ಎಸ್.ಬಿ.ಎಚ್ ಹೈಸ್ಕೂಲ ಆನೂರುದಲ್ಲಿ ಎಸ್,ಡಿ.ಎ ಅಂತಾ ಕೆಲಸ ಮಾಡುತ್ತೇನೆ. ಸದರಿ ಶಾಲೆ ಅರೆ ಸರಕಾರಿ ಎಂದರೆ ಸರಿ. ಸದರಿ ಶಾಲೆಯಿಂದ ನನಗೆ ಸರಕಾರದಿಂದ ಸಂಬಳ ಬರುತ್ತದೆ ಎಂದರೆ ಸರಿ. ಸದರಿ ಶಾಲೆಯಲ್ಲಿ 25 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನನಗೂ ಕೆ.ಸಿ.ಎಸ್.ಆರ್ ನಿಯಮ ಅನ್ವಯಿಸುತ್ತದೆ ಎಂದರೆ ಸರಿ. ನನ್ನ ಹೆಸರಿನ ಮೇಲೆ 10 ಎಕರೆ ಜಮೀನು ಇದೆ. ಸದರಿ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನಗೆ ಜಮೀನು ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿ ವರ್ಷ ಆದಾಯ ತೆರಿಗೆ ಭರಣಾ ಮಾಡುತ್ತೇನೆ. ನನ್ನ ಎಲ್ಲಾ ಹಣಕಾಸಿನ ವ್ಯವಹಾರ ಸದರಿ ಆದಾಯ ತೆರಿಗೆ ತುಂಬುವಾಗ ನಮೂದು ಮಾಡುತ್ತೇನೆ ಎಂದರೆ ಸರಿ. ನಾನು ನೌಕರಿ ಸೇರಿದಾಗ ತಿಂಗಳಿಗೆ ಸಂಬಳ 3048/- ರೂಪಾಯಿ ಇತ್ತು. 2020 ನೇ ಸಾಲಿನಲ್ಲಿ ನನ್ನ ಸಂಬಳ 55,000/- ರೂಪಾಯಿ ಇತ್ತು.

2) ನನ್ನ ಸಂಬಳದಲ್ಲಿ ಜಿಪಿಎಫ್ ಎಲ್ಐಸಿ ಮತ್ತು ಸಾಲ ಕಂತುಗಳು ಕಟ್ ಆಗುತ್ತದೆ ಎಂದರೆ ಸರಿ. ಎಲ್ಲ ಮೇಲಿನ ಡಿಡೆಕ್ಷನ್ ಆಗಿ ನನಗೆ 45,000/- ರೂಪಾಯಿ ಸಂಬಳ ಬರುತ್ತದೆ. ನಾನು ಆದಾಯ ತೆರಿಗೆ ದಾಖಲೆಗಳನ್ನು ಹಾಜರುಪಡಿಸಲು ಯಾವುದೆ ತೊಂದರೆ ಇಲ್ಲ ಎಂದರೆ ಸರಿ. ನಾನು ಸದರಿ ದಾಖಲೆ ಹಾಜರುಪಡಿಸುತ್ತೇನೆ. ನಮ್ಮ ಕೆ.ಸಿ.ಎಸ್.ಆರ್ ನಿಯಮದ ಪ್ರಕಾರ ಲೇವಾದೇವಿ ವ್ಯವಹಾರ ಮಾಡಲು ಅವಕಾಶ ಇಲ್ಲ ಎಂದರೆ ಸರಿ. ಮುಂದಿನ ದಿನಾಂಕದಂದು ಆದಾಯ ತೆರಿಗೆ ಹಾಜರುಪಡಿಸುತ್ತೇನೆ .

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಆದೇಶಿಸಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.